# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 168 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಈವರೆಗೂ ರೈತರಿಗೆ ಮಂಜೂರಾಗಿರುವ ಜಮೀನುಗಳನ್ನು ಪೋಡಿ ಮಾಡಿ ದುರಸ್ತಿ ಪಡಿಸಲು ಬಾಕಿಯಿರುವ ಪ್ರಕರಣಗಳೆಷ್ಟು;</td><td>ಕೋಲಾರ ಜಿಲ್ಲೆ ವ್ಯಾಪ್ತಿಯಲ್ಲಿ ಸರ್ಕಾರದಿಂದ ರೈತರಿಗೆ ಮಂಜೂರಾಗಿರುವ ಜಮೀನುಗಳ ಮಂಜೂರಿಯಂತೆ ಪೋಡಿ ಮಾಡಲು ಕಂದಾಯ ಶಾಖೆಯಿಂದ ಒಟ್ಟು 7,239 ಬ್ಲಾಕ್ ಗಳ ಅನುಬಂಧ-1 ಸ್ವೀಕೃತಿಯಾಗಿರುತ್ತವೆ. ಈ ಪೈಕಿ 5,143 ಬ್ಲಾಕ್ ಗಳ ಅಳತೆ ಕಾರ್ಯ ಪೂರ್ಣ ಗೊಂಡಿದ್ದು, ಭೂಮಾಪನ ಶಾಖೆಯಲ್ಲಿ ಅಳತೆ ಮತ್ತು ಇತರೆ ವಿವಿಧ ಹಂತಗಳಲ್ಲಿ ಇನ್ನೂ 2,096 ಬ್ಲಾಕ್‌ಗಳು ಅಳತೆಯಾಗಿ ವಿವಿಧ ಹಂತಗಳಲ್ಲಿ ಬಾಕಿ ಇರುತ್ತವೆ.</td></tr>
<tr><td>(ಆ)</td><td>ಈ ರೀತಿ ಬಾಕಿಯಿರುವ ಪ್ರಕರಣಗಳ ಪೈಕಿ ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆ ಗಳಿದ್ದು, ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದೇ ರೈತರು ತಮ್ಮ ಜಮೀನುಗಳನ್ನು ಪೋಡಿ ಮಾಡಿಸಲಾಗದೇ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಕರಣಗಳ ವಿವರಗಳನ್ನು ಒದಗಿಸುವುದು)</td><td rowspan="2">ಬಂದಿದೆ.<br>ತಾಲ್ಲೂಕುವಾರು ಪ್ರಕರಣಗಳ ವಿವರ ಈ ಕೆಳಗಿನಂತಿರುತ್ತದೆ:-
<table>
<tr><th>ಕ್ರ.</th><th>ತಾಲ್ಲೂಕುಗಳು</th><th>ಸ್ವೀಕೃತಿ ಆಗಿರುವ ಅನುಬಂಧ-1 / ಬ್ಲಾಕ್‌ಗಳು</th><th>ಅಳತೆಯಾಗಿರುವ ಬ್ಲಾಕ್‌ಗಳು</th><th>ದುರಸ್ತಿ ಪಡಿಸಿರುವ ಬ್ಲಾಕ್‌ಗಳು</th><th>ವಿವಿಧ ಹಂತದಲ್ಲಿ ಬಾಕಿ</th></tr>
<tr><td>1</td><td>ಕೋಲಾರ</td><td>1712</td><td>1636</td><td>627</td><td>1085</td></tr>
<tr><td>2</td><td>ಮಾಲೂರು</td><td>395</td><td>303</td><td>175</td><td>220</td></tr>
<tr><td>3</td><td>ಬಂಗಾರಪೇಟೆ</td><td>835</td><td>553</td><td>143</td><td>692</td></tr>
<tr><td>4</td><td>ಕೆ.ಜಿ.ಎಫ್</td><td>604</td><td>448</td><td>179</td><td>425</td></tr>
<tr><td>5</td><td>ಮುಳಬಾಗಿಲು</td><td>2516</td><td>1978</td><td>624</td><td>1892</td></tr>
<tr><td>6</td><td>ಶ್ರೀನಿವಾಸಪುರ</td><td>1177</td><td>600</td><td>180</td><td>997</td></tr>
<tr><td></td><td>ಒಟ್ಟು</td><td>7239</td><td>5518</td><td>1928</td><td>5311</td></tr>
</table>
ಗೈರು ವಿಲೇ ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ ಇತ್ಯರ್ಥ ಪಡಿಸಲು 27061 ಪ್ರಕರಣಗಳು ಬಾಕಿ ಇದ್ದು, ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ.</th><th>ತಾಲ್ಲೂಕುಗಳು</th><th>ಗೈರು ವಿಲೇ ಸಮಿತಿಗೆ ಶಿಫಾರಸ್ಸು ಮಾಡಲಾದ ಮಂಜೂರಿದಾರರು</th><th>ಗೈರು ವಿಲೇ ಸಮಿತಿಯಲ್ಲಿ ಅನುಮೋದನೆಯಾಗಿರುವ ಸಂಖ್ಯೆ</th><th>ಬಾಕಿ</th></tr>
<tr><td>1</td><td>ಕೋಲಾರ</td><td>4995</td><td>07</td><td>4988</td></tr>
<tr><td>2</td><td>ಮಾಲೂರು</td><td>4818</td><td>11</td><td>4807</td></tr>
<tr><td>3</td><td>ಬಂಗಾರಪೇಟೆ</td><td>3568</td><td>07</td><td>3561</td></tr>
<tr><td>4</td><td>ಕೆ.ಜಿ.ಎಫ್</td><td>1854</td><td>10</td><td>1844</td></tr>
<tr><td>5</td><td>ಮುಳಬಾಗಿಲು</td><td>5780</td><td>11</td><td>5769</td></tr>
<tr><td>6</td><td>ಶ್ರೀನಿವಾಸಪುರ</td><td>6097</td><td>05</td><td>6092</td></tr>
<tr><td></td><td>ಒಟ್ಟು</td><td>27112</td><td>51</td><td>27061</td></tr>
</table>
ಇಂತಹ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 156 ಎಸ್</td></tr>
<tr><td>(ಇ)</td><td>ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿ, ರೈತರ ಹಿತರಕ್ಷಣೆಗೆ ಸರ್ಕಾರವು ಈವರೆಗೆ ತೆಗೆದುಕೊಂಡ ಕ್ರಮಗಳೇನು;</td></tr>
</table>

| | | |
|---|---|---|
| (ಈ) | ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ, ಇತ್ಯರ್ಥ ಪಡಿಸದೇ ಬಾಕಿಯಿರುವ ಪ್ರಕರಣ ಗಳೆಷ್ಟು; (ವಿವರಗಳನ್ನು ಒದಗಿಸುವುದು) | ಎಸ್ಎಂ 2024 ದಿನಾಂಕ:25-11-2024ರಂತೆ ತಹಶೀಲ್ದಾರರು ಅಗತ್ಯವಾಗಿರುವ ಕನಿಷ್ಠ ಮೂಲ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿ, ಮಂಜೂರಿ ದಾಖಲೆಗಳ ನೈಜತೆಯನ್ನು ಖಾತರಿಪಡಿಸಿ ಕೊಂಡು, ನಮೂನೆ 01 ರಿಂದ 05 ಭರ್ತಿಮಾಡಿ ಪೋಡಿ ದುರಸ್ತಿ ಅಳತೆಗಾಗಿ ಪ್ರಕರಣಗಳನ್ನು ತಂತ್ರಾಂಶದ ಮುಖಾಂತರ ಸಲ್ಲಿಸಿರುತ್ತಾರೆ.<br>ಮಂಜೂರಾಗಿರುವ ಜಮೀನುಗಳನ್ನು ಪೋಡಿ ದುರಸ್ತಿ ಮಾಡುವ ಸಂಬಂಧ ಪ್ರಸ್ತುತ ನಮೂನೆ-1 ರಿಂದ 05 ರ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ |
| (ಉ) | ಈ ಬಾರಿ ಗೈರು ಕಡತಗಳ ವಿಲೇವಾರಿ ಸಮಿತಿಗಳಲ್ಲಿ ಇತ್ಯರ್ಥವಾಗದೇ, ವಿನಾಕಾರಣ ರೈತರನ್ನು ಅಲೆದಾಡಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು ; ಯಾವ ಕಾಲಮಿತಿಯೊಳಗೆ ಇಂತಹ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುವುದು? | ದ್ದು, ಈ ರೀತಿ ಬಾಕಿ ಇರುವ ಪ್ರಕರಣಗಳಲ್ಲಿ ತಾಲ್ಲೂಕು ಕಚೇರಿಗಳಲ್ಲಿ ಮಂಜೂರಾತಿ ಹಾಗೂ ಖಾತೆಗೆ ಸಂಬಂಧಿಸಿದ ದಾಖಲೆಗಳನುಸಾರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಗೈರು ವಿಲೇ ಪ್ರಕರಣಗಳ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 1ನೇ ಮತ್ತು 3ನೇ ಶನಿವಾರದಂದು ಸಭೆ ನಡೆಸಿ ಸಮಿತಿಯ ತೀರ್ಮಾನದಂತೆ ಕ್ರಮ ತೆಗೆದುಕೊಂಡು ಹಂತ ಹಂತವಾಗಿ ಇಂತಹ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುತ್ತದೆ. |

ಸಂಖ್ಯೆ: ಕಂಇ 11 ಎಸ್ ಎಸ್ ಸಿ **2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು